(78)

egistered No. B C 182

ಶ್ರೀ ದ್ವಾರಕಾ ಜಗದ್ಗುರು ಪರಮಹಂಸ್ಪರಿವ್ರಾಜಕಾಚಾರ್ಯವರ್ಯ, ಶ್ರೀ ಶೃಂಗೇರಿ ಜಗದ್ಗುರು
ಪರಮಹಂಸಪರಿವ್ರಾಜಕಾಚಾರ್ಯವರ್ಯ ಉಮಯಾ ಅಸಂಗ್ರಹ ಕೈಪಿಯಾಗಿದೆ

ಗೋರಕ್ಷಣಿ
GORAKSHANA

15 ನೇ ವರ್ಷ 1965 ನೇ ಏಪ್ರಿಲ್ 26 April 1965

Help The Gorakshana

★

"ಗೋರಕ್ಷಣಾ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣದೆಯೆ, ಶಾಲೆಪಾಠಾ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ : 'ಗೋರಕ್ಷಣಾ' ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ- ಗೋರಕ್ಷಣ ಆಫೀಸು ಶಾಕಪುರಚಾವಡಿ, ಮೈಸೂರು 1

ಪ್ರಾಣಿದಯೆ

ಪಶುಪಾಲನೆ ಭೂಮ್ಯವಶ್ಯಕತೆಯುಗಳು ಭಾರತೀಯರು ಮುಖ್ಯ ಕಸುಬುಗಳಾಗಿ ಅನಾದಿ ಕಾಲದಿಂದಲೂ ಬಂದ ಧರ್ಮವಾಗಿದೆ ; ಪ್ರಾಣಿಗಳಿಗೆ ಯಾರೂ ಯಾವ ರೂಪದಲ್ಲಿಯ ಹಿಂಸೆ ಮಾಡಬಾರದು ; ಹಾಗೆ ಮಾಡಿದರೆ ಶಿಕ್ಷೆಗೆ ಗುರಿಯಾಗಬೇಕಾಗಿದೆ ; ಪ್ರಾಣಹಿಂಸೆ ಮಾಡಿದರೆ ಮಹಾಪಾತಕವಾಗುವುದೆಂದು ಹಿಂದೂ ದೇಶೀಯರಾದ ಭಾರತದ ಎಲ್ಲಾ ಮತೀಯರಿಗೂ ಹಿಂದಿನಿಂದಲೂ ಧರ್ಮವಾಗಿ ಬೋಧೆ ಒಂದಿದೆ ; ಅದರಲ್ಲೂ ಅಶೋಕ ಚಕ್ರವರ್ತಿಯು ಆಳುವಾಗ ಪ್ರಾಣಿಹಿಂಸೆ ಮಾಡಕೂಡದೆಂದು ತನ್ನ ಗಡಿಯ ಎಲ್ಲ ಕಡೆಗಳಲ್ಲೂ ಕಲ್ಲುಕಂಬಗಳ ಮತ್ತು ಬಂಡೆಗಳ ಮೇಲೆ ಕೆತ್ತಿಸಿರುವನು ; ಇಂದು ಸ್ವತಂತ್ರ ಭಾರತದಲ್ಲಿ ಪ್ರಾಣಿಹಿಂಸೆಗಳೂ ಬಲಿದಾನಗಳೂ, ಹಿಂಸಾತ್ಮಕೃತ್ಯಗಳೂ ಕಟುಕಾಂಗಡಿಗಳೂ ಹಿಂದಿಗಿಂತ ಹೆಚ್ಚಾಗಿಲ್ಲವೇ ? ಹೀಗೆ ಹಿಂದಿನ ಆಡಳಿತಶಕ್ತಿಗಳೂ ಇಂದು ಹೆಚ್ಚಾಗಿರುವಾಗ, ಆ ಹಿಂಸಾ ತತ್ವದ ಅದಾರಿಂದ ಕಟ್ಟಿದ ರಾಜ್ಯಕ್ಕೆ ಕೆಟ್ಟ ಹೆಸರು ಬರಲಾರದೆ ? ಸರ್ಕಾರವು ಈ ವಿಚಾರದಲ್ಲಿ ಹೆಚ್ಚು ನಿಗ ತೆಗೆದುಕೊಂಡು ಹಿಂಸೆಯನ್ನ ಶಿಕ್ಷಿಸಿ, ಭಾರತಾದ್ಯಂತ ಶಾಂತಿ ಮಾಡಲೆಂದು ಬೇಡುತ್ತೇನೆ. — ಬಿ ಜೆ. ಶಾಸ್ತ್ರಿ

ವಿದ್ಯಾರಣ್ಯಪುರಂ, ಮೈಸೂರು

ಗೋರಕ್ಷಣ ಸೇವಾರ್ಥ

ಮಂಡ್ಯಾ ತಾಲ್ಲೂಕು ಕೆಂಗೋಡಿನ ವಿಲಿಟು ಪ್ರೆಸಿಡೆಂಟರು ಶ್ರೀ ಎ. ವಿ ಲಕ್ಷ್ಮೀ ನಾರಾಯಣಯ್ಯನವರು ಕಳುಹಿಸಿರುವ ಒಂದು ರೂಪಾಯಿಯನ್ನು ವಂದನಾಪೂರ್ವಕ ಸ್ವೀಕರಿಸಿ, ಭಗವಂತನು ಅವರಿಗೆ ಸಕಲ ಸಂಪತ್ಸಂಗಳಿಗಳನ್ನು ದಯಪಾಲಿಸಲೆಂದು ಕೋರುತ್ತೇವೆ.

ಕಾಮಧೇನು ಪೂಜಾ

★

ಅನಂತಶಯನಸಿಂಹಯ್ಯಂಗಾರ್
ಶಾಸ್ತ್ರ ಧರ್ಮ ಪ್ರಚಾರ ಸಭಾ
ಹೊಂಗಸಂದ್ರ

(ಮುಂದುವರಿದುದು)

ಈ ರೀತಿ ಶಾಸ್ತ್ರಗಳೆಲ್ಲಾ ಗೋವಿನ ಮಹಿಮೆಯನ್ನು ಹೊಗಳುತ್ತಿವೆ : ಹೀಗಿದ್ದರೂ ಕೂಡ ಇಂದು ಭಾರತದಲ್ಲಿ ಪರಿಸ್ಥಿತಿ ಹೇಗಿದೆ ; ವಿದೇಶೀ ವಸ್ತುಗಳನ್ನು ಉಪಯೋಗಿಸಲು ಅನುಮತಿ ಇತ್ತಿದೆ ; ಗೋವನ್ನು ಕಡಿಯಲು ಚಿತ್ರಹಿಂಸೆ ಮಾಡಲು ಮುಕ್ತ ಅವಕಾಶ ಕೊಟ್ಟಿದೆ ; ಹಿಂದುಗಳು ಗೋವಿನ ವಂಶವನ್ನು ವೃದ್ಧಿಮಾಡುತ್ತಿದ್ದಾರೆ ; ಮೈಸೂರು ಸರಕಾರವು ಗೋಹತ್ಯವನ್ನು ನಿಷೇಧಿಸಿದ್ದರೂ ಹಳ್ಳಿಗಳಲ್ಲಿ ನಿರ್ಭಾವಿಕವಾಗಿ ಗೋಹತ್ಯ ನಡೆಯುತ್ತಿದೆ : ಕೇವಲ ಕಾನೂನಿನಿಂದ ಮಾತ್ರವೇ ಅದನು ನಿಲ್ಲಿಸಲು ಸಾಧ್ಯವಿಲ್ಲ ; ಆದರೆ ಶಿಕ್ಷೆಹ್ಮು ಭಯ ಕಾಕ್ಕಾಗಿ ಕಾನೂನು ಇರಬೇಕು. ಜನರಲ್ಲಿ ಜಾಗೃತಿ ಆಗಬೇಕು. ಗೋವಿಗೆ ತೊಂದರೆ ಮಾಡಿದಲ್ಲಿ ಶಾಸ್ತ್ರಗಳಲ್ಲಿ ಏನು ಹೇಳಿತ್ತದೆ, ನೋಡೋಣ,

ಯಾವನಾದೂ ಅಜ್ಞಾನದಿಂದ ಗೋಹತ್ಯೆಯನ್ನು ಮಾಡಿದ್ದಾದರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ಜುಟ್ಟು ಸಹಿತ ವಾಗಿ ಕ್ಷೌರಮಾಡಿಸಿಕೊಂಡು, ಮೂರು ಸಂಧ್ಯಾ ಕಾಲಗಳಲ್ಲಿಯೂ ನುಗ್ಗು ಗಿ ಸ್ನಾನ ಮಾಡುತ್ತಾ ರಾತ್ರಿ ಹೊತ್ತು ಗೋವುಗಳ ನಡುವೆ ಮಲಗಬೇಕು, ಹಗಲು ಹೊತ್ತು ಗೋವುಗಳ ಸಂಗಡ ಹೋಗಬೇಕು ; ಬಹಳವಾದ ಬಿಸಲಲ್ಲಿಯೂ ಇದ್ದು, ಮಳೆಯಲ್ಲಿಯಾದರೂ ಧಳಿಯಲ್ಲಿಯಾದರೂ, ಛಾಳಿಯಲ್ಲಿಯಾದರೂ ತನ್ನ ಶಕ್ತ್ಯಾನುಸಾರ ಗೋವಿಗೆ ರಕ್ಷಣೆ ಮಾಡಬೇಕು ತನ್ನನ್ನು ರಕ್ಷಿಸಿಕೊಳ್ಳಬಾರದು ; ಗೋವು ನೀರು ಕುಡಿದ ನಂತರ ತಾನು ನೀರು ಕುಡಿಯಬೇಕು, ಅವು ಮಲಗುವುದಕ್ಕೆ ಮುಂಚೆ ತಾನು ಕೂಡಬಾರದು ; ದೀಪಲ್ಪಟ್ಟಿದ್ದಾಗಿದ್ದರೂ, ಕತ್ತಲೆಯಲ್ಲಿ ಮುಳುಗಿದ್ದರೂ ತನ್ನ ಸರ್ವಪ್ರಾಣಗಳಿಂದಲೂ ಎಚ್ಚರಿಕೆ : ತನ್ನದಾದರೂ ಇತರರಿಂದಾದರೂ, ತನಿ ಭೂಮಿಗಳಲ್ಲಿ ಮೇಯುತ್ತಿರುವುದನ್ನೂ, ಹಾಲು ಕುಡಿಯುವ ಕರುವನ್ನೂ ಹೇಳಬಾರದು:

ಬ್ರಾಹ್ಮಣನಿಗೋಸ್ಕರ ವಾದರೂ, ಗೋವಿಗೋಸ್ಕರವಾದರೂ ಯಾವಾತನು ಪ್ರಾಣಬಿಡುತ್ತಾನೋ ಅದನು ಗೋ ಬ್ರಾಹ್ಮಣಾನ್ನು ರಕ್ಷಿಸಿದವನು, ಅವನು ಬ್ರಹ್ಮಹತ್ಯೆಯ ಪಾತಕದಿಂದ ಮುಕ್ತ ನಾಗುತ್ತಾನೆ.

ಗೋವಧೆಗೆ ಅನುಸಾರ ವ್ರಾಜಾಪತ್ಯ ವನ್ನು ಮಾಡಿ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು ; ಗೋಹತ್ಯೆ ಮಾಡಿದವನು ಹೋಲುಭಾಗಕ್ಕೆ ಬಾಲಬರುವ ಹಾಗೆ ಗೋವಿನ ಚರ್ಮವನ್ನು ಹೊದ್ದುಕೊಂಡು ಗೋವನ್ನು ಅನುಸರಿಸಬೇಕು, ಗೋವುಗಳು ನಿಲ್ಲಲು ತಾನೂ ನಿಲ್ಲಬೇಕು, ಅವು ಕೂಡಲು ತಾನೂ ಕೂಡಬೇಕು, ಅವು ಸ್ಥಳಕ್ಕೆ ಸೇರಲು ತಾನೂ ಸೇರಬೇಕು : ಮಾತ್ಸರ್ಯವಿಲ್ಲದೇ ರಾತ್ರಿವಾಗಲೂ ಛಳಿಗಳಿದಲು ಮಳೆಗಳಲ್ಲಿಯೂ ಗೋರಕ್ಷಣೆ ಮಾಡಿದೇ ಅಕ್ಕರಕ್ಕೆ ಮಾಡಿಕೊಳ್ಳಬಾರದು. ಗೋವಿಗೆ ಕಳ್ಳರು ಕೆರು ಹುಲಿ ಮೊದಲಾದವು ಗಳ ಭಯವಿಲ್ಲದಂತೆ ಮಾಡಬೇಕು : ಈ ರೀತಿ ಜೀವನ್ಮಾಗಿ ಪ್ರಾಯಶ್ಚಿತ್ತ ಮಾಡಿಕೊಂಡು ಬಂದು ಒಂದು ಎತ್ತನ್ನಾ ಹತ್ತು ಗೋವುಗಳನ್ನಾ ದಾನಮಾಡಿದರೆ ಸದಿನೂರು ತಿಂಗಳ ಮೇಲೆ ಶುದ್ಧನಾಗುತ್ತಾನೆ. [ಮುಂದುವರಿಯುವುದು

ಶಾಖಾಹಾರದ ಶ್ರೇಷ್ಠತೆ

ಸೂಕ್ಷ್ಮ ಅಹಾರ ಸೆವನೆಗಳು (ಇತ್ತೀಚೆಗೆ) ಹೆಚ್ಚಿನ ಪರಿಣಾಮದಲ್ಲಿ ಭೆಷಜ್ಯ ವಿಜ್ಞಾನತಜ್ಞರ ಧ್ಯಾನವನ್ನು ಆಕರ್ಷಿಸುತ್ತಿರುವುದು ಹಿಮಾಲಯದ ಹುಜಗಳು ದೀರ್ಘಜೀವಿಗಳಾಗಿರಲು ಅವು ಹೇಂಥವಾಗಿ ತಿನ್ನುವ ಜಂತ್ರಾಲು ಹಣ್ಣಿನ ಯಾವುದಾರೂ ಗುಣವು ಕಾರಣವೋ ? ತಿರೋವಿಕಾರಾಜನ್ಯ ಭೀಷಣ ಮರಣ ಸಂಜ್ಞೆಗೆ ಪಾತ್ರಿಯಾಗಿ ಸಾಕ್ಷಿಯಾಗಿ ಅಹಾರವು ಕಾರಣವೋ ? ದಿ ಪ್ರಾಕ್ಟಿಷನರ್ ಎಂಬ ಆಂಗ್ಲ ವೈದ್ಯಪತ್ರಿಕೆಯಲ್ಲಿ ಅತಿಶಯವಾಗಿ ಪ್ರಸಾರ ಪಡೆದಿರುವ ಮುಖ್ಯ ವಿಷಯವೆಂದರೆ ಸಾಮಿಷ ಪಥ್ಯವು, ತನ್ನ ಜೀವವಾದವನ್ನೇ ಅಹಾರ ಸುಧಾರಣ ಶೋಧನೆಯಲ್ಲಿ ಸಂಪೂರ್ಣವಾಗಿ ಳೆದ ಒಬ್ಬ ಆಗ್ರಗಣ್ಯನ ಮುನ್ನೂರನೇ ವಾರ್ಷಿಕೋತ್ಸವವನ್ನು ನೆನಪಿಸಲು ಫಿಬ್ರವರಿ ತಿಂಗಳಲ್ಲಿ ವರ್ಷಾಡು ಧೂಡಿತ್ತು.

ಈ ಮಹಿಮನು ವಿಲಿಯಂ ಲ್ಯಾಂಬೆ ಎಂ ಡಿ, ಎಂಬವರಾಗಿದ್ದು. ಈತನು ಕಾಯುಲೆ ಕಾಲೇಜ್ ಆಫ್ ಫಿಜಿಷಿಯನ್ಸ್ ಸಂಸ್ಥೆಯ ಫೆಲಸದಸ್ಯನಾಗಿದ್ದನು. ತನ್ನ 83 ನೇ ವಯಸ್ಸನ್ನು ದಾಟಿದ ನಂತರ 1947 ನೇ ಇಸವಿಯಲ್ಲಿ ವ್ಯಕ್ತನಾದನು. ಅಗಿನ ಕಾಲದಲ್ಲಿ ಇಷ್ಟು ದೀರ್ಘ ಕಾಲ ಜೀವಿಸಿದ್ದ ವಿರಳ. ಹಾದಿವರ ಜೀವಿತಕ್ಕೆ ಕಾರಣಾಹಾರವೇ ಶ್ರೇಷ್ಠವೆಂದೂ ಬಹು ಜಲವಾಸವು ಅವಶ್ಯಕವೆಂದೂ ಆತನ ಘೋಷಣೆಯಾಗಿದೆ

Truth— ಶೇಷ

ಗೋಸಂವರ್ಧನ -- ಗೋಸಮ್ಮರ್ಧನ

ಕೆಲ ದಿನಗಳ ಹಿಂದೆ ಹೈದರಾಬಾದಿನಲ್ಲಿ ಅಖಿಲ ಭಾರತ ಗೋಸಂವರ್ಧನ ಸಮ್ಮೇಳನ ಜರುಗಿತ್ತು : ಅದರಲ್ಲಿ ಶ್ರೀಗಳಾದ ಪ್ರಧಾನಿ ಲಾಲಬಹದ್ದೂರ ಶಾಸ್ತ್ರಿ, ಸುಬ್ರಹ್ಮಣ್ಯಂ, ಸಂಜೀವರೆಡ್ಡಿ, ಪಾಟೀಲ, ಮುಕ್ತು ಎಲ್ಲಾ ರಾಜ್ಯಗಳಲ್ಲಿರುವ ಪಶು ಇಲಾಖೆಯ ಮಂತ್ರಿಗಳು ಅಲ್ಲದೆ ಹೇಬರು ಭಾಗವಹಿಸಿದ್ದರು; ಇಷ್ಟೆಲ್ಲಾ ಮಂತ್ರಿಗಳು ಹಾಗೂ ದೊಡ್ಡ ಮನುಷ್ಯರು ಅಲ್ಲಿ ಸೇರಿ ಮಾತಾಡಿದ್ದಾದರೂ ಏನು, ಮಾತಾಡಿದ್ದಾದರೂ ಏನನ್ನು ? ಅವರ ಮಾತಿನ ವೈಖರಿಯನ್ನು ನೋಡುವಾಗ ಇವರು ಗೋಸಂವರ್ಧನ ಸಮ್ಮೇಳನದಲ್ಲಿ ಭಾಗವಹಿಸಿದ್ದರೋ ಅಥವಾ ಗೋಸಮ್ಮರ್ಧನ ಗುಂಪಿನಲ್ಲಿ ಭಾಗವಹಿಸಿದ್ದರೋ ಎಂದು ಸಾಮಾನ್ಯ ಭಾಂತೇಯುನಿಗೆ ಅರ್ಥವಾಗದಿಂದು.

ಅವರಲ್ಲಿ ಅದ್ಯಾಂತದಾದೂ ಗೋಸಂವರ್ಧನೆಯ ಕುರಿತು ಸ್ಪಷ್ಟವಾಗಿ ಸೂಚಿಸಿದ್ದಾರೆಯೆ ? ಬಡ ಭಾತೇಯುಂನ್ನು ಈಲ್ಲಿ ತೆಗಳಲಾಯಿತು : ಒಂದು ರಾಷ್ಟ್ರದ ಮಂತ್ರಿಗಳೇ ಅಲ್ಲಿನ ಜನರ ಕುರಿತು ಲಘುವಾಗಿ ಮಾತಾಡಿ ಅಪಹಾಸ್ಯ ಮಾಡಿದಲ್ಲಿ ಇತರ ರಾಷ್ಟ್ರಗಳ ಜನರು ನಮ್ಮನ್ನು ಯಾವ ದೃಷ್ಟಿಯಿಂದ ಕಂಡಾರು ? ಗೋವೂಜೆ ಅಂಥಹ ದ್ವೇಷ ಪ್ರತೀಕವೇನು ? ಗೋಭಕ್ಷಣೆ ನಾಗರೀಕತೆಯ ಲಕ್ಷಣವೇನು ? ನಮ್ಮ ನಾಗರೀಕತೆ ಅದೆಕ್ಕ ಹೋಗುತ್ತಿದೆಯೋ ?

ಹೋರಿಯ ಖತ್ನವನ್ನು ಯಂತ್ರೋಪಕರಣಗಳಿಗೆ, ಅಂಧಶ್ರದ್ಧೆಯಿಂದ ಬದಿಗೊತ್ತಿ, ಬಿಟ್ಟುಕೊಡಬೇಕೆಂದು ಮಂತ್ರಿಗಳು ಜನತೆಗೆ ಕರೆಯಿತ್ತಿದ್ದಾರೆ ; ಇದು ಕಾಂಗ್ರೆಸ್ಸಿಗೂ ಅನ್ವಯಿಸುತ್ತದಾಯೇನು ? ಅನ್ವಯಿಸುತ್ತದಾದಲ್ಲಿ ಕಾಂಗ್ರೆಸ್ಸು ತನ್ನ [ಹೌದು] ಬಸವಣ್ಣ ಚಿಹ್ನೆಯನ್ನು ಪೂಲೆಗೊತ್ತಿ, ಹಾರ್ಕ್ಯುಲಸ್ಸನ್ನು ಲಾಂಛನವನ್ನಾಗಿ ಇಟ್ಟುಕೊಳ್ಳಲು ಸಿದ್ಧವಿದೆಯೇ ? ತನ್ನ ಗುರುತನ್ನು ಬಡಲಲು ಹೊಸ ನೆಂಕರ ಜನತೆಗೆ ಕರೆ ಇತ್ತಲ್ಲಿ ಅವರು ಸುಲಭವಾಗಿ ಅನುಸರಿಸಿಯಾರು : ಇಲ್ಲದಿದ್ದಲ್ಲಿ ಅದನ್ನು ಭಕ್ಷಣದ ಬಾಗಾಳಿ ಎಂದು ಮುಖ ಅತ್ತ ತಿರುಗಿಸಿಯಾರು ?

ಶ್ರಾದ್ಧವಂತೆ ಮುಗ್ದ ಭಾಂತೇಯುರ ಮತಗಳೂ ಕಾಂಗ್ರೆಸಿಗರಿಗೆ ಬೇಕು : ಹಾಗೆಯೇ ಅನ್ಯ ಮತಾವಲಂಬಿಗಳ ಮತಗಳೂ ಬೇಕೇಬೇಕು ; ಅದಕ್ಕಾಗಿ ದ್ವಿಮುಖ ನೀತಿ : ಹಿಂದೂಗಳ ಮತಗಳಿಗಾಗಿ ಹೋರಿಯನ್ನು ಗುರುತಾಗಿಟ್ಟುಕೊಂಡಿದ್ದಾರೆ ; ಅನ್ಯರನ್ನು ತೃಪ್ತಿಪಡಿಸಿ ಮತಗಿಟ್ಟಿಸಿಕೊಳ್ಳಲು ಗೋವಧೆಯನ್ನು ಬಹಿಷ್ಕರಿಸಲು ಬೆದರಿತ್ತಿದ್ದಾರೆ : ಇದುದರಿಂದಲೇ ಗೋಸಂವರ್ಧನ ಸಮ್ಮೇಳನದಲ್ಲಾ ಗೋದಧೆಯನ್ನು ತಡೆಯುವ ಕುರಿತು ಅಪರೂ ಭಕ್ತಾದರವೆತ್ತಿರುವುದಿಲ್ಲ : ಬದಲು ಅವುಗಳಿಗೂ ಗರ್ಭತಡೆಯನ್ನು ಪ್ರಚಾರಕ್ಕ ತರಬೇಕೆಂದು ಹೇಳಿದ್ದಾರೆ ; ಗೋಸಂಪತ್ತು (ಅಣು ಯುಗದಲ್ಲಿ ?) ಇಂದು ಹೊರೆಯುಂತೆ ! ಅದುದರಿಂದ ಅಂಧಶ್ರದ್ಧೆಯನ್ನು ಬದಿಗೆ ಸರಿಸಿ ಸುಖೈಯನ್ನು ಕಮ್ಮಿಗೊಳಿಸಲು ಜನತೆ ಪ್ರಯತ್ನಿಸಬೇಕಂತೆ !

ಗೋಸಂವರ್ಧನೆಯ ಮೇಲೆ ಮಾತಾಡಲು ಕಾಂಗ್ರೆಸ್ಸು ಮಂತ್ರಿಗಳಿಗೆ ನಾಳಿಗೆಯಾದರೂ ಹೇಗೆ ಬರುತ್ತದೆ ? ಗೋವಿನ ಅಹಾರ ಪದಾರ್ಥಗಳು ಇಂದೂ ವಿದೇಶಗಳಿಗೆ ರಫ್ತಾಗುತ್ತಿದೆ : ಅದಕ್ಕೆ ಕಡಿವಾಣ ಅವುದಾಗುತ್ತಿರುವುದಾದರೂ ಏನು ? ನವನವೀನ ಕಾನೂನು, ಕಾಮರ್ಕಾನೆಯ ಭೀಕರ ಹುಂಕ್ರಗಳು !

— ಶಿವಶಂಕರ್

ಪಾಟ್ನಾ — ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸು 4-5 ರಾಜ್ಯಗಳಲಿ ಬಹುಮತ ಕಳೆದುಕೊಳ್ಳುವುದೆಂದು ಕಮ್ಯೂನಿಸ್ಟು ನಾಯಕ ನಂಬೂದಿರಿಪಾದರು ಹೇಳಿದರು.

ಕರಾಚಿ — ಪಾಕಿಸ್ತಾನವು ಭಾರತಕ್ಕೆ ಪತ್ರ ಬರೆದು ಜಾರುಬೆರಿ ಭಾಗದ ಸರ್ವೇ ಬೇಗ ತಡೆಸಿ ಅದಂ ಮರ್ಯಾದೆಗೆ ತ್ವರಿತಗೊಳಿಸಬೇಕೆಂದಿರುವುದು.

ಬೆಂಗಳೂರು — ಮುಂದಿನ ವರ್ಷಾರಂಭದಲ್ಲಿ ಸೆಕೆಂಡರಿ ವಿದ್ಯಾಭ್ಯಾಸ ಉಚಿತವಾಗುವುದು.

ವುಡ್‌ಲ್ಯಾಂಡ್ಸ್ 23-4-65 ರಿಂದ

ಅವೋಪ ಆರಂಭ

.... ಮನಮೋಹನ ಈಸ್ಟ್‌ಮೆನ್ ಕಲರ್ ಚಿತ್ರ ....

ಬಾಘಿ (ಹಿಂದಿ) BAGHI

ತಾರಾಗಣ— ಪ್ರದೀಪಕುಮಾರ್, ಲೀಲಾನಾಯ್ಡು, ಹೆಲೆನ್, ಜೀನತ್, ಉಲ್ಲಾಸ್

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— 23-4-65 ರಿಂದ

ಅವೋಪ ತೆಲುಗು ಪೌರಾಣಿಕ ಚಿತ್ರ — ದಿನ 3 ಆಟಗಳು

ರಾಮದಾನು

ತಾರಾಗಣ- ನಾಗಯ್ಯ, ಕನ್ನಾಂಬಾ, ಗುಮ್ಮಡಿ, ಅಂಜಲಿದೇವಿ, ಶಿವಾಜಿ ಗಣೇಶ್

SHAKTI

SUDHA

A Superb Tonic



ಗೋರಕ್ಷಣ ಪ್ರಾಣಪಣ ಕಾರ್ಯಕರ್ತರು ಹೆಚ್ಚಿಚ್ಚಾಗಿ ಸಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavedi Press Gomatapuram Mysore 4